ಓ.ಎಸ್. ನಂಃ **59/2023**
ಪಿ.ಡಬ್ಲ್ಯೂಃ **1**

ದಿನಾಂಕ **07-03-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ: ಶ್ರೀ. ಎಂ ವಿ ಕೆ ವಕೀಲರಿಂದಃ

ದಾವಾ ಜಮೀನು ಸರ್ವೆ ನಂ.113 ಆಗಿರುತ್ತದೆ. ಸದರಿ ಆಸ್ತಿ ನನಗೆ ನನ್ನ ತಾತನಿಂದ ಬಂದಿರುತ್ತದೆ. ಸರ್ವೆ ನಂ.113 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿ 11 ಗುಂಟೆ ಇದೆ ಎಂದು ನುಡಿಯುತ್ತಾರೆ. ಉಳಿದ 11 ಗುಂಟೆ ನನ್ನ ತಂದೆ ಹೆಸರಿನಲ್ಲಿ ಇದೆ. ನಿಪಿ-1 ರ ಪಹಣಿ ಪತ್ರಿಕೆಯ ಪ್ರಕಾರ ಸರ್ವೆ ನಂ.113 ರಲ್ಲಿ 01 ಎಕರೆ 12 ಗುಂಟೆ ಜಮೀನು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ 01 ಎಕರೆ 12 ಗುಂಟೆ ಜಮೀನಿನ ಪೂರ್ವಕ್ಕೆ ಖಾಲಿ ಜಾಗ ಇದೆ. ಸದರಿ ಖಾಲಿ ಜಾಗ ಸರ್ವೆ ನಂಬರಿನಲ್ಲಿ ಇರುತ್ತದೆ, ಆದರೆ ನನಗೆ ಅದರ ಸರ್ವೆ ನಂಬರು ಗೊತ್ತಿಲ್ಲ. ಪಶ್ಚಿಮಕ್ಕೆ ಗೊರನೂರು ಗ್ರಾಮದಿಂದ ಹನುಮಾನ್ ದೇವರ ಗುಡಿಯ ಕಡೆಗೆ ಹೋಗುವ ರಸ್ತೆ ಇದೆ. ಉತ್ತರಕ್ಕೆ ಖಾಲಿ ಜಾಗ ಇದೆ. ಸದರಿ ಖಾಲಿ ಜಾಗ ಯಾರಿಗೆ ಸೇರಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ದಕ್ಷಿಣಕ್ಕೂ ಸಹ ಖಾಲಿ ಜಾಗ ಇದ್ದು ಅದು ಯಾರಿಗೆ ಸೇರಿರುತ್ತದೆ ಎಂಬುದು ನನಗೆ ಗೊತ್ತಿಲ್ಲ.

2. ನನಗೆ ಸೇರಿದ 11 ಗುಂಟೆ ಜಮೀನಿನ ನಾಲ್ಕು ಕಡೆಗೆ ಖಾಲಿ ಜಾಗ ಇದೆ. ಅವುಗಳು ಸರ್ವೆ ನಂಬರಿನಲ್ಲಿ ಇರುವ ಖಾಲಿ ಜಾಗ ಇರುತ್ತವೆ, ಆದರೆ ನನಗೆ ಅವುಗಳ ಸರ್ವೆ ನಂಬರು ಗೊತ್ತಿಲ್ಲ. ನೀವು ಸದರಿ 11 ಗುಂಟೆಯ ಪೈಕಿ 08 ಗುಂಟೆಗೆ ಸಂಬಂಧಿಸಿದಂತೆ ಈ ದಾವೆ ದಾಖಲಿಸಿದ್ದು ಸದರಿ 08 ಗುಂಟೆಯ ಚೆಕ್ ಬಂದಿ ಗೊತ್ತಿದೆಯೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಸರ್ವೆ ನಂ.113 ರ ಜಮೀನು ಕೃಷಿ ಭೂಮಿಯಾಗಿದ್ದು ಈಗ ಬೀಳು ಬಿದ್ದಿರುತ್ತದೆ. ಸದರಿ ಸರ್ವೆ ನಂಬರಿನಲ್ಲಿನ ಸಂಪೂರ್ಣ ಭೂಮಿ ಬೀಳು ಬಿದ್ದಿರುತ್ತದೆ. ಈಗ 20 ವರ್ಷಗಳಿಂದ ಬೀಳು ಬಿದ್ದಿದೆ. ಸರ್ವೆ ನಂ.113 ರಲ್ಲಿನ 28 ಗುಂಟೆ ಅನಂತರೆಡ್ಡಿ ತಂದೆ ಶಂಕ್ರಣ್ಣ ರವರಿಗೆ ಸೇರಿದ್ದಾಗಿದ್ದು ಸದರಿ ಸಂಪೂರ್ಣ ಜಮೀನಿನಲ್ಲಿ ಮನೆಗಳು ನಿರ್ಮಾಣ ಆಗಿದ್ದಾವೆ ಎಂದರೆ ಸರಿಯಲ್ಲ. ಅನಂತರೆಡ್ಡಿ ರವರ ಸದರಿ 28 ಗುಂಟೆಯಲ್ಲಿ ಬಣವೆ

ಹಾಗೂ ತಿಪ್ಪೆಗಳು ಸಹ ಇದ್ದಾವೆ ಎಂದರೆ ಸರಿ. ದಾವಾ 08 ಗುಂಟೆ ಆಸ್ತಿಯಲ್ಲಿಯೂ ಸಹ ಮನೆಗಳು, ಬಣಿವೆ ಹಾಗೂ ತಿಪ್ಪೆ ಇದ್ದಾವೆ ಎಂದರೆ ಸರಿಯಲ್ಲ. ಸರ್ವೆ ನಂ.113 ರ ಜಮೀನು ಗ್ರಾಮಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿ. ಊರಿಗೆ ಹೊಂದಿಕೊಂಡಿರುವುದರಿಂದ ನನ್ನ ಹಿರಿಯರು ಜಮೀನನ್ನು ಬೇರೆಯವರಿಗೆ ಮನೆ ಕಟ್ಟಿಕೊಳ್ಳಲು ಹಾಗೂ ಬಣಿವೆ ಮತ್ತು ತಿಪ್ಪೆ ಹಾಕಿಕೊಳ್ಳಲು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಹಿರಿಯರಿಂದ ಜಾಗ ಖರೀದಿಸಿ ಅಲ್ಲಿ ಮನೆ ಹಾಗೂ ಜೋಪಡಿ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ಈ ದಾವೆಯನ್ನು ಯಾಕೇ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ನಾವು ಏನಾದರು ಮಾಡಲು ಹೋದಾಗ ಪ್ರತಿವಾಯರು ಜಾಗ ತಮಗೆ ಸೇರಿರುತ್ತದೆ ಎಂದು ತಕರಾರು ಮಾಡುತ್ತಿದ್ದರಿಂದ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯೂ ಸಹ ಒಂದು ದಾವೆ ದಾಖಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ನನ್ನ ಹಾಗೂ ನನ್ನ ತಂದೆಯ ಆಸ್ತಿಗಳಿಗೆ ತಕರಾರು ಮಾಡಿದ್ದರು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ